ಬೆಂಗಳೂರ್ ಸಿಟಿ ಮ್ಯುನಿಸಿಪಾಲಿಟಿ.

ನೋ ೧ ಟಿ ಸ್.

ತಾರೀಖು 15ನೇ ಡಿಸೆಂಬರ್ 1896ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಬೆಂಗಳೂರ್ ಸಿಟಿ ವೆಸ್ಟರ್ಲ್ ಯಕ್ಸ್ ಟೆನ್ಷನ್ ಎಂಬ ಪ್ರದೇಶವು ಇತಃಪರ ಚಾಮರಾಜೇಂದ್ರ ಪೇಟೆಯಂದು ಕರೆಯಲ್ಪಡುತ್ತೆ.

2. ಚಾಮರಾಜೇಂದ್ರ ಪೇಟೆಯ ಮೇರೆಗಳು.

ಉತ್ತರಕ್ಕೆ—ಮೈಸೂರ್ ರೋಡ್ (ಹೊಸ ತರಗಿನಪೇಟೆಯಿಂದ ಪ್ರಾರಂಭಿಸಿ ಆಗ್ರಹಾರದ ಕೆರೇ ರೋಡ್ ಸೇರುವವರಿಗೂ)

ಪೂರ್ವಕ್ಕೆ—ತರಗುಪೇಟೆ (ಆಲ್ಬರ್ಟ್ ವಿಕ್ಟರ್ ರೋಡ್ ವರೆವಿಗೂ) ಮತ್ತು ಅಲ್ಲಿಂದ ಫೌರ್ಟ್‌ಗ್ಲೇಸಿಸ್ ರೋಡ್.

ದಕ್ಷಿಣಕ್ಕೆ—ಚಾಮರಾಜೇಂದ್ರ ಪೇಟೆಯ 5ನೇ ಮೆಯಿನ್ ರೋಡ್.

ಪಶ್ಚಿಮಕ್ಕೆ—ಚಾಮರಾಜೇಂದ್ರ ಪೇಟೆಯ 9ನೇ ಕ್ರಾಸ್ ಸ್ಟ್ರೀಟ್ ಎಂಬ ಅಡ್ಡಬೀದಿ.

3. ಚಾಮರಾಜೇಂದ್ರ ಪೇಟೆಯಲ್ಲಿ ಪೂರ್ವ ಪಶ್ಚಿಮವಾಗಿ ಹೋಗುವ ಮತ್ತು ಉತ್ತರದಿಂದ ಪ್ರಾರಂಭವಾಗುವ ಆರು ಮೇಯಿನ್ ರೋಡುಗಳೆಂಬ ಮುಖ್ಯ ರಸ್ತೆಗಳು ಈ ಕೆಳಗೆ ನಮೂದಿಸಿರುವ ಹೆಸರುಗಳಿಂದ ಕರೆಯಲ್ಪಡುವವು.

1. ನಂಬರ್ 1ನೇ ಮೆಯಿನ್‌ರೋಡ್ (ಉತ್ತರಪಾರ್ಶ್ವ ಮೈಸೂರ್ ರೋಡಿನ ಪಕ್ಕದಲ್ಲಿ).
2. ಆಲ್ಬರ್ಟ್ ವಿಕ್ಟರ್ ರೋಡ್.
3. ನಂಬರ್ 2ನೇ ಮೆಯಿನ್ ರೋಡ್.
4. ನಂಬರ್ 3ನೇ ಮೆಯಿನ್ ರೋಡ್.
5. ನಂಬರ್ 4ನೇ ಮೆಯಿನ್ ರೋಡ್.
6. ನಂಬರ್ 5ನೇ ಮೆಯಿನ್ ರೋಡ್.

4. ಉತ್ತರದಿಂದ ದಕ್ಷಿಣಕ್ಕೆ ಹೋಗುವ ಪೊಂಭತ್ತು ಅಡ್ಡಬೀದಿಗಳು ಈ ಕೆಳಗೆ ನಮೂದಿಸಿರುವಂತೆ ಕರೆಯಲ್ಪಡುವವು.

ನಂಬರ್ 1ನೇ ಕ್ರಾಸ್ ಸ್ಟ್ರೀಟ್ (ಪೂರ್ವಪಾರ್ಶ್ವ ಫೌರ್ಟ್‌ಗ್ಲೇಸಿಸ್ ರೋಡಿಗೆ ಬಾಜು.)

ನಂಬರ್ 2ನೇ ಕ್ರಾಸ್ ಸ್ಟ್ರೀಟ್.
ನಂಬರ್ 3ನೇ ಕ್ರಾಸ್ ಸ್ಟ್ರೀಟ್.
ನಂಬರ್ 4ನೇ ಕ್ರಾಸ್ ಸ್ಟ್ರೀಟ್.
ನಂಬರ್ 5ನೇ ಕ್ರಾಸ್ ಸ್ಟ್ರೀಟ್.
ನಂಬರ್ 6ನೇ ಕ್ರಾಸ್ ಸ್ಟ್ರೀಟ್.
ನಂಬರ್ 7ನೇ ಕ್ರಾಸ್ ಸ್ಟ್ರೀಟ್.
ನಂಬರ್ 8ನೇ ಕ್ರಾಸ್ ಸ್ಟ್ರೀಟ್.
ನಂಬರ್ 9ನೇ ಕ್ರಾಸ್ ಸ್ಟ್ರೀಟ್. (ಪಶ್ಚಿಮಪಾರ್ಶ್ವ ಅತ್ಯಂತ ಕೊನೆಯಲ್ಲಿ.)

5. ಚಾಮರಾಜೇಂದ್ರ ಪೇಟೆಯಿಂದ ಬ್ಯಾರಕ್ಸ್‌ಗೆ ಹೋಗುವ ರಸ್ತೆಯು ಸೂಲ್ತಾ ರೋಡ್ ಎಂದು ಕರೆಯಲ್ಪಡುವುದು.

ಟಿ. ಟಿ. ಲೆನಾರ್ಡ್,
ಪ್ರೆಸಿಡೆಂಟ್.

ಕೋಲಾರ್ ಡಿಸ್ಟ್ರಿಕ್ಟ್.

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 14ನೇ ಡಿಸೆಂಬರ್ 1896.

1. ಜೋಡಿ ಬಾಕಿದಾರರಾದ ಶ್ರೀನಿವಾಸಾಚಾರ್ ವಗೈರೇರಿಂದ ಬರಬೇಕಾದ ಜೋಡಿ ಬಾಕಿಗಾಗಿ ಇದರಡಿ ನಮೂದಾಗುವ ಫಾರ್‌ಫಿಟ್ಟಾದ ಸ್ಥಿರಸ್ವತ್ತು ಕೋಲಾರ್ ಡಿಸ್ಟ್ರಿಕ್ಟ್ ಗೌರೀಬಿದನೂರ್ ತಾಲ್ಲೂಕು ಅನುಲ್‌ದಾರ್ ಕಛೇರೀಲಿ 1897ನೇ ಜನವರಿ 30ನೇ ತಾರೀಖಿನೆಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧ ಪಡಿಸಲ್ಪಟ್ಟಿ ಇದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1895–96ನೇ ಸಾಲಿಗೆ ಪೂರ್ತಿಯಾಗಿ* ಪಾವತಿ ಮಾಡಬೇಕಾದ ಜೋಡಿ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ 254–14–6 ರೂ ಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜುದಾರನು ಹರಾಜು ಮೊಬಲಗಿನ ಶೇಕಡಾ 25 ರೂಪಾಯಿಗಳನ್ನು ಡಿಪಾಜಿಟ್ ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕಿ ಮೊಬಲಗು ಹರಾಜು ತಾರೀಖು ಲಾಗಾಯತು ದಿವಸಗಳಲ್ಲಿ ಪಾವತಿಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ ಮೊಬಲಗನ್ನು ಹಾಜರ್ಮಾಡಿದವನು ಕಳೆದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ ಮೊಬಲಗು ಹಾಜರ್ಮಾಡಲ್ಪಡದೇ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

740

5. ಹರಾಜಿನಲ್ಲಿ ಸವಾಲ್ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೇ ಯಾ ಏಜಂಟ್ ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೇ ಎಂಬ ಅಂಶವನ್ನು ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕಿದಾರನಾಗಲಿ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲಿ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪರ್ಯಂತ್ಯಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯೂಟಿ ಕಮ್ಮಿಷನರವರಿಂದ ಮುಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗೆದುಕೊಂಡವರು ಹರಾಜು ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯೂಟಿ ಕಮ್ಮಿಷನರವರಿಂದ ಹರಾಜು ಮುಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರು ಸದರೀ ಸ್ವತ್ತಿನ ಸ್ವಾಧೀನವನ್ನು ಹೊಂದುವರು, ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯೂಟಿ ಕಮ್ಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಲಿತಗಳಿಗೆ ಗವರ್ಮೆಂಟಿನವರು ಜವಾಬ್ದಾರ್ರಲ್ಲವೆಂಬ ಅಂಶವನ್ನು ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಿಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಆಗಾಯತು ೩೦ ದಿವಸಗಳಲ್ಲಿ ಡೆಪ್ಯೂಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು.

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕಿದಾರರ ಹೆಸರು.	ಸ್ವತ್ತಿನ ತಪ್ಸೀಲ್.						ಸರಕಾರಕ್ಕೆ ಬರಬೇಕಾದ ನೋಟಿಸ್ ಫೀ ಸಮೇತ ಬಡ್ಡಿ ಸಹಿತವಾದ ಬಾಕಿ ಮೊಬಲಗು.		
				ಕಟ್ಟಡಗಳು.		ಜಮೀನು.						
				ಕಟ್ಟಡದ ಹೆಸರು.	ಅಂದಾಜು ಕಿಮ್ಮತ್ತು.	ಸರ್ವೆ ನಂಬರ್ ಅಥವಾ ಜಮೀನಾ ಹೆಸರು.	ಖುಷ್ಕಿ ತರೀ ಬಾಗಾಯತು ಪರಂಪೋಕು ಸರ್ಕಾರಕ್ಕೆ ಸಾಲಿಯಾನಾ ಬರಬೇಕಾದ್ದು.	ಸರ್ವೇ.	ಆಕಾರ.			
1	2	3	4	5	6	7	8	9		10			11		
					ರೂ. ಆ. ಪೈ.			ಖಂ.	ಕು.	ರೂ.	ಆ.	ಪೈ.	ರೂ.	ಆ.	ಪೈ.
ಗೋಣೀಬೀಡನಹೂರು.	ಮಂಜೇನಹಳ್ಳಿ	ರಾಗಿನಾಳಹಳ್ಳಿ ಜೋಡಿ ಗ್ರಾಮ	ಸ್ವಾಮಿನಾಥಾಚಾರ್ ಮಗ ಶ್ರೀನಿವಾಸಾಚಾರ್ ಮೈಸೂರು.	..	..	ಪೂರಾ ಗ್ರಾಮ	ಖುಷ್ಕಿ ತರೀ ಬಾಗಾಯತು ಪರಂಪೋಕು	4 22 0 0	$2\frac{3}{4}$ $19\frac{1}{2}$ $5\frac{3}{8}$ $3\frac{5}{8}$	339	4	0	254	14	6
							ಸರ್ಕಾರಕ್ಕೆ ಸಾಲಿಯಾನಾ ಬರಬೇಕಾದ್ದು.	27	$11\frac{1}{4}$	254	14	6	ಬಡ್ಡಿ ಸಹಿತ ಬರಬೇಕು.		

* ಈ ಹರಾಜಿಗೆ ಭೋಗ್ಯ ವಗೈರೆ ಜೋಡಿದಾರ್ರು ಮಾಡಿರುವದರಿಂದ ಯೇಸೂ ಬಾಧಕವಾಗುವದಿಲ್ಲ.

ಯಂ. ಕೃಷ್ಣಯ್ಯಂಗಾರ್,
ಫಾರ್ ಡೆಪ್ಯೂಟಿ ಕಮ್ಮಿಷನರ್.